ಸಿ. ಸಿ. ನಂ.- 1132/23

ಸಿ.ಡಬ್ಲ್ಯೂ.- 25 ಪಿ.ಡಬ್ಲ್ಯೂ.- 12

1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 27-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.
ಸಾಕ್ಷಿಯ ವಿಚಾರಣೆಯನ್ನು ವಿಡಿಯೋ ಕಾನ್ಪರೇನ್ಸ್ ಮೂಲಕ ಮಾಡಲಾಯಿತು.

| | |
|---|---|
| ಸಾಕ್ಷಿ ಹೆಸರು - | ಶ್ರೀನಿವಾಸ ಸಿ ಮೇಟಿ |
| ತಂದೆಯ ಹೆಸರು - | ಚಂದ್ರಪ್ಪ |
| ವಯಸ್ಸು - | 48 ವರ್ಷಗಳು |
| ಉದ್ಯೋಗ - | ಪಿ.ಐ, ಸಂಚಾರಿ ಪಿ ಎಸ್, ಧಾರವಾಡ |
| ವಾಸಸ್ಥಳ - | ಧಾರವಾಡ |

ಮುಖ್ಯ ವಿಚಾರಣೆ-ಮಾನ್ಯ ಎ. ಪಿ. ಪಿ. ಅವರಿಂದ

ನಾನು ದಿನಾಂಕ 22.11.2022 ರಿಂದ 24.02.2024 ರವರೆಗೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪಿ.ಐ. ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ- 16.08.2023 ರಂದು ಚಾ.ಸಾ.24 ರವರಿಂದ ಪ್ರಕರಣದ ಕಡತವನ್ನು ಸ್ವೀಕರಿಸಿ ತನಿಖೆ ಮುಂದುವರೆಸಿ, ಅದೇ ದಿನ ಚಾ.ಸಾ.24 ಮತ್ತು ನಮ್ಮ ಠಾಣೆಯ ಸಿಬ್ಬಂದಿಯವರಿಗೆ ಮೃತನ ಶವ ತನಿಖಾ ಪರೀಕ್ಷೆ ಜರುಗಿಸಲು ಹುಬ್ಬಳಿಯ ಕಿಮ್ಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೆ. ಮರುದಿನ ಚಾಸಾ.15 ರವರಿಗೆ ಕಲಂ.133 ಐ ಎಂ ವಿ ಕಾಯಿದೆ ಅಡಿಯಲ್ಲಿ ನೋಟೀಸ್ ಜಾರಿ ಮಾಡಿರುತ್ತೇನೆ. ಚಾಸಾ.16 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ ಚಾಸಾ.24 ರವರು ಶವ ತನಿಖಾ ಪಂಚನಾಮೆ ಜೊತೆಗೆ ಸಾಕ್ಷಿದಾರರ ಹೇಳಿಕೆಯನ್ನು ವಿಶೇಷ ವರದಿ ಜೊತೆಗೆ ಕೊಟ್ಟಿರುತ್ತಾರೆ, ಅದನ್ನು ನಾನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಮರುದಿನ ಆರೋಪಿ ಸಂ.2 ರವರು ಕಾರು ಸಂ.ಕೆಎ-37-ಎನ್-7789 ನೇದ್ದನ್ನು ಠಾಣೆಗೆ ಹಾಜರುಪಡಿಸಿರುತ್ತಾರೆ. ನಂತರ ಚಾಸಾ.11 ಮತ್ತು 12 ಪಂಚರನ್ನು ಠಾಣೆಗೆ ಕರೆಸಿ ಅವರ ಸಮಕ್ಷಮ ಸದರಿ ವಾಹನದ ಜಪ್ತಿ ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ 11.30 ರವರೆಗೆ ಜರುಗಿಸಿರುತ್ತೇನೆ. ಆ ಕಾಲಕ್ಕೆ ಭಾವ ಚಿತ್ರ ತೆಗೆಸಿರುತ್ತೇನೆ. ನಂತರ ಆರೋಪಿ ಸಂ.2 ರವರ ಸ್ವ ಖುಷಿ ಹೇಳಿಕೆ ಪಡೆದಿರುತ್ತೇನೆ. ನಂತರ ಮಾನ್ಯ ನ್ಯಾಯಾಲಯಕ್ಕೆ ಪಿ ಎಫ್ ಸಲ್ಲಿಸಿರುತ್ತೇನೆ ಹಾಗೂ ಆರ್ ಟಿ ಓ ಕಛೇರಿಗೆ ವಾಹನದ ಐ ಎಂ ವಿ ವರದಿ ನೀಡಲು ಮನವಿ ಮಾಡಿಕೊಂಡಿರುತ್ತೇನೆ. ನಂತರ ಚಾಸಾ.20 ರವರಿಂದ ಐ ಎಂ ವಿ ವರದಿಯನ್ನು ಪಡೆದಿರುತ್ತೇನೆ.

ಚಾಸಾ.13 ರವರು ಘಟನಾ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ್ದಕ್ಕೆ ಪಂಚರಾದ ಚಾಸಾ.9 ಮತ್ತು 10 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಸಂಜೆ 4.00 ರಿಂದ 5.00 ಗಂಟೆಯವರೆಗೂ ಜರುಗಿಸಿರುತ್ತೇನೆ. ಆ ಸಮಯದಲ್ಲಿ ಭಾವಚಿತ್ರ ತೆಗೆಸಿ, ಕಚ್ಚಾ ನಕಾಶೆ ತಯಾರಿಸಿರುತ್ತೇನೆ. ನಂತರ ಠಾಣೆಗೆ ಮರಳಿ ಚಾಸಾ.13 ರವರು ತೋರಿಸಿದಂತೆ ಚಾಸಾ.9 ಮತ್ತು 10 ಪಂಚರ ಸಮಕ್ಷಮ ಸಂಜೆ 5.00 ರಿಂದ 6.00 ಗಂಟೆ ವರೆಗೆ ಮೋಟಾರ್ ಸೈಕಲ್ ನ ಜಪ್ತಿ ಪಂಚನಾಮೆ ಜರುಗಿಸಿರುತ್ತೇನೆ. ನಂತರ ಚಾಸಾ.3, 13 ಮತ್ತು 14 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಚಾಸಾ.15 ರವರು ಕಾರಿಗೆ ಸಂಬಂಧಪಟ್ಟ ದಾಖಲಾತಿಗಳ ಜೊತೆ ಠಾಣೆಗೆ ಹಾಜರಾದರು ಹಾಗೂ ನಮ್ಮ ನೋಟೀಸ್ ಗೆ ಪ್ರತ್ಯುತ್ತರ ಕೊಟ್ಟಿರುತ್ತಾರೆ, ಅವರ ಹೇಳಿಕೆ ಪಡೆದು ಹಾಗೂ ಅವರಿಂದ ಇಂಡೆಮಿನಿಟಿ ಬಾಂಡ್ ಪಡೆದು, ವಾಹನವನ್ನು ಅವರಿಗೆ ಬಿಡುಗಡೆ ಮಾಡಿರುತ್ತೇವೆ. ಚಾಸಾ.17 ರವರು ಭಾವಚಿತ್ರಗಳನ್ನು ತೆಗೆದಿದ್ದರಿಂದ ಅವರಿಂದ ದೃಡೀಕರಣವನ್ನು ಪಡೆದಿರುತ್ತೇನೆ. ಚಾಸಾ.19 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ 28.08.2023 ರಂದ ಮೋಟಾರ್ ಸೈಕಲ್ ನ ಐ ಎಂ ವಿ ವರದಿಯನ್ನು ಚಾಸಾ.21 ರವರಿಂದ ಪಡೆದಿರುತ್ತೇನೆ ಹಾಗೂಾ ಮೃತನ ಪಿ ಎಂ ವರದಿಯನ್ನು ಚಾಸಾ.23 ರವರಿಂದ ಪಡೆದಿರುತ್ತೇನೆ. ಮರುದಿನ ಚಾಸಾ.2 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ.22 ರವರಿಂದ ಪಡೆದಿರುತ್ತೇನೆ. ದಿಃ 17.09.2023 ರಂದು ಆರೋಪಿ ಸಂ.3 ರವರಿಗೆ ಕಲಂ.133 ಐ ಎಂ ವಿ ಕಾಯಿದೆ ಅಡಿ ನೋಟೀಸ್ ಜಾರಿ ಮಾಡಿರುತ್ತೇನೆ. ದಿಃ 02.10.2023 ರಂದು ಸದರಿ ಆರೋಪಿ ಠಾಣೆಗೆ ಹಾಜರಾಗಿ ಪ್ರತ್ಯುತ್ತರ ಕೊಟ್ಟಿರುತ್ತಾರೆ ಹಾಗೂ ಮೋ.ಸೈ. ಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ, ಅದನ್ನು ಪರಿಶೀಲಿಸಿದಾಗ ಅದನ್ನು ಚಲಾಯಿಸುತ್ತಿದ್ದ ವ್ಯಕ್ತಿಗೆ ಚಾಲನಾ ಪರವಾನಿಗೆ ಇರಲಿಲ್ಲ ಹಾಗೂ ಸದರಿ ವಾಹನದ ವಿಮೆ ಚಾಲ್ತಿಯಲ್ಲಿರಲಿಲ್ಲ ಎಂದು ತಿಳಿಯಿತು. ದಿಃ 10.10.2023 ರಂದು ಚಾಸಾ.2 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 18.08.2023 ರಂದು ಚಾಸಾ.1 ರವರ ಮರುಹೇಳಿಕೆಯನ್ನು ಪಡೆದಿದ್ದೆ. ನಂತರ ತನಿಖೆ ಪೂರ್ಣಗೊಂಡಿದ್ದು, ದೋಷಾರೋಪಣೆ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿ ಶವ ತನಿಖಾ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-10 ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-10(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-9 ಭಾವಚಿತ್ರದಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-11 ಮತ್ತು 12 ಐ ಎಂ ವಿ ವರದಿಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-11(ಬಿ) ಮತ್ತು ನಿಪಿ-12(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-13 ಗಾಯದ ಪ್ರಮಾಣ ಪತ್ರದಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-2 ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಇ) ಎಂದು ಗುರುತಿಸಲಾಯಿತು. ನಿಪಿ-3 ರಿಂದ 5 ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-6 ಜಪ್ತಿ ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-6(ಇ) ಎಂದು ಗುರುತಿಸಲಾಯಿತು. ನಿಪಿ-7 ಮತ್ತು 8 ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಚಾಸಾ.15 ರವರಿಗೆ ನೀಡಿದ ನೋಟೀಸ್ ನೋಡಿ ಗುರುತಿಸಿದ್ದು, ಅದನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಅದಕ್ಕೆ ಚಾಸಾ.15 ರವರು ನೀಡಿದ ಪ್ರತ್ಯುತ್ತರ ನೋಡಿ ಗುರುತಿಸಿದ್ದು, ಅದನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿ ಸಂ.3 ರವರಿಗೆ ನೀಡಿದ ನೋಟೀಸ್ ನೋಡಿ ಗುರುತಿಸಿದ್ದು, ಅದನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ಅದಕ್ಕೆ ಆರೋಪಿ ಸಂ.3 ರವರು ನೀಡಿದ ಪ್ರತ್ಯುತ್ತರ ನೋಡಿ ಗುರುತಿಸಿದ್ದು, ಅದನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮೃತನ ಪಿ ಎಂ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಬಿ ಸಿ ಎಂ ರವರಿಂದ-</u>

ನಾನು ಒಂದು ವರ್ಷ ಸಂಚಾರ ಪೊಲೀಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ರಾಷ್ಟ್ರೀಯ ಹಬ್ಬಗಳ ದಿನ ಗುಂಡಾ ಫಾರೆಸ್ಟ್ ನಿಂದ ಟಿ ಬಿ ಡ್ಯಾಂ ವರೆಗೆ ಹೆಚ್ಚಿನ ಟ್ರಾಫಿಕ್ ಇರುತ್ತದೆ ಹಾಗೂ ಜನರ ಹೆಚ್ಚಿನ ಓಡಾಟ ಇರುತ್ತದೆ ಎಂದರೆ ಸರಿ. ಹೀಗಾಗಿ ನಮ್ಮ ಠಾಣೆಯ ಸಿಬ್ಬಂದಿಯವರನ್ನು ಅಲ್ಲಿ ಬಂದೋಬಸ್ತಗೆಂದು ಡೆಪ್ಯೂಟ್ ಮಾಡುತ್ತೇವೆ ಎಂದರೆ ಸಾಕ್ಷಿ ಅಲ್ಲಿ ಅಂಡರ್ ಪಾಸ್ ಬಳಿ ಸಿಬ್ಬಂದಿಯನ್ನು ಡೆಪ್ಯೂಟ್ ಮಾಡುತ್ತೇವೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಅಲ್ಲಿ ಯುವಕರು ಟೂ ವೀಲರ್ ವಾಹನದಲ್ಲಿ ವೀಲಿಂಗ್ ಮಾಡುತ್ತಾರೆ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ಆದ ಯಮಹಾ ಆರ್ ಎಕ್ಸ 100 ವಾಹನದ ಉತ್ಪಾದನೆಯು ಸುಮಾರು 20 ವರ್ಷಗಳ ಹಿಂದೆಯೇ ತಾಂತ್ರಿಕ ದೋಷದ ಸಲುವಾಗಿ ನಿಂತುಹೋಗಿತ್ತು ಎಂದರೆ ಸರಿ. ಯಾವುದೇ ವಾಹನವನ್ನು ಸುಮಾರು 15 ವರ್ಷಗಳ ಕಾಲ ಮಾತ್ರ ಬಳಸಬೇಕು, ಅದರ ನಂತರ ರಿನಿವಲ್ ಪಡೆಯಬೇಕು ಎಂಬ ಕಾನೂನು ಇದೆ ಎಂದರೆ ಸರಿ. ಮೋಟಾರ್ ಸೈಕಲ್ ನ್ನು ಎಷ್ಟು ವರ್ಷದ ಹಿಂದೆ ಖರೀದಿ ಮಾಡಲಾಗಿತ್ತು ಹಾಗೂ ಎಷ್ಟು ವರ್ಷದಿಂದ ಬಳಸಲಾಗಿತ್ತು ಹಾಗೂ ಅದರ ರಿನಿವಲ್ ಮಾಡಿಸಲಾಗಿತ್ತೇ ಎಂಬ ಬಗ್ಗೆ ಆರ್ ಟಿ ಓ ಕಛೇರಿಯಿಂದ ಪಡೆದಿರುತ್ತೀರೇ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು, ಆರೋಪಿ ಸಂ.3 ರವರು ತಮ್ಮ ಪ್ರತ್ಯುತ್ತರದಲ್ಲಿ ಈ ಬಗ್ಗೆ ಮಾಹಿತಿ ಕೊಟ್ಟಿರುತ್ತಾರೆ ಹಾಗೂ ಆರ್ ಸಿ ದಾಖಲೆಯಲ್ಲಿ ಇದರ ಬಗ್ಗೆ ನಮೂದು ಇದೆ ಎಂದು ನುಡಿಯುತ್ತಾರೆ. ಸದರಿ ಮೋ.ಸೈ. ಚಾಲನೆಗೆ ಯೋಗ್ಯವಲ್ಲ ಎಂಬ ಬಗ್ಗೆ ಮಾಲೀಕರಿಂದಾಗಲೀ ಅಥವಾ ಆರ್ ಟಿ ಓ ಕಛೇರಿಯಿಂದಾಗಲೀ ವರದಿ ಪಡೆದಿದ್ದಿರೇ ಎಂದರೆ ಸಾಕ್ಷಿ ವಾಹನದ ರಿನಿವಲ್ ಆಗಿಲ್ಲ, ಅದನ್ನು ಚಾಲನೆ ಮಾಡಲು ಯೋಗ್ಯವಲ್ಲ ಎಂದು ಅರ್ಥ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಎನ್ ಹೆಚ್ ರಸ್ತೆಗಳಲ್ಲಿ ಸ್ಪೀಡ್ ಲಿಮಿಟ್ ಬೋರ್ಡ ಇಲ್ಲ ಎಂದರೆ ವಾಹನದ ಚಾಲನೆಯ ವೇಗಕ್ಕೆ ನಿಗದಿತ ಸ್ಪೀಡ್ ಲಿಮಿಟ್ ಇರುವುದಿಲ್ಲ ಎಂದು ಅರ್ಥ ಎಂದರೆ ಸರಿ. ಒಂದು ವೇಳೆ ಆ ರೀತಿ ಸ್ಪೀಡ್ ಲಿಮಿಟ್ ಬೋರ್ಡ ಇದ್ದರೆ ಅಷ್ಟೇ ವೇಗದಲ್ಲಿ ಅಥವಾ ಅದಕ್ಕಿಂತ ಕಡಿಮೆ ವೇಗದಲ್ಲಿ ವಾಹನವನ್ನು ಚಲಾಯಿಸಬೇಕು ಎಂದರೆ ಸರಿ. ಸಾಕ್ಷಿ ಮುಂದುವರೆದು, ಘಟನಾ ಸ್ಥಳಲ್ಲಿ ಸ್ಪೀಡ್ ಲಿಮಿಟ್ ಬೋರ್ಡ ಇದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಎನ್ ಹೆಚ್ ರಸ್ತೆಯಲ್ಲಿ ಅಪಘಾತ ಆದರೆ ಸ್ಪೀಡ್

ಲಿಮಿಟ್ ಬಗ್ಗೆ ತನಿಖೆ ಮಾಡಿ, ಕಡತದಲ್ಲಿ ಅಳವಡಿಸಬೇಕು ಆದರೆ ಈ ದೋಷರೋಪಣಾ ಪತ್ರದಲ್ಲಿ ಈ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಘಟನಾ ಸ್ಥಳವು ಎಂ ಎಂ ಹಳ್ಳಿ ಕಡೆಯಿಂದ ಅಂಡರ್ ಪಾಸ್ ಮುಖಾಂತರ ಟಿ ಬಿ ಡ್ಯಾಂಗೆ ಹೋಗುವ ಎನ್ ಹೆಚ್ ರಸ್ತೆಯ ಎಡಬದಿಯಲ್ಲಿ ಇದೆ ಎಂದರೆ ಸರಿ. ಹೊಸಪೇಟೆಯ ಶನಿಮಹಾತ್ಮ ಗುಡಿಯಿಂದ ಬರುವಂತಹ ರಸ್ತೆ ಘಟನಾ ಸ್ಥಳಕ್ಕೆ ಕೂಡುತ್ತದೆ ಎಂದರೆ ಸರಿ. ಅಲ್ಲಿ ಟ್ರಾನ್ಸಪೋರ್ಟ ಕಛೇರಿಗಳು ಇವೆ ಎಂದರೆ ಸರಿ. ಅಲ್ಲಿ ಆರ್ ಟಿ ಓ ಚೆಕ್ ಪೋಸ್ಟ್ ಇವೆ ಎಂದರೆ ನನಗೆ ನೆನಪಿಲ್ಲ. ಜಪ್ತಿ ಪಡಿಸಿಕೊಂಡ ಕಾರಿನ ಹಿಂಭಾಗದ ಡಿಕ್ಕಿಯ ಮೇಲ್ಬಾಗದ ಗಾಜು ಜಖಂಗೊಂಡಿದೆ ಎಂದರೆ ಸರಿ. ಅದೇ ರೀತಿ ಮೋ.ಸೈ.ನ ಮುಂಭಾಗ ಮಾತ್ರ ಜಖಂಗೊಂಡಿದೆ ಎಂದರೆ ಸರಿ. ಸಾಮಾನ್ಯವಾಗಿ ಮೋ.ಸೈ ನಲ್ಲಿ ವೀಲಿಂಗ್ ಮಾಡುತ್ತಾ ಬೇರೆ ವಾಹನಕ್ಕೆ ಡಿಕ್ಕಿ ಹೊಡೆದರೆ ಮೋ.ಸೈ ನ ಮುಂಭಾಗ ಜಖಂ ಆಗುತ್ತದೆ ಎಂದರೆ ಈ ಪ್ರಕರಣದಲ್ಲಿ ಮೋ.ಸೈ ಗೆ ಆದ ಜಖಂಗಳಂತೆ ಆಗುತ್ತದೆ ಎಂದರೆ ಸಾಕ್ಷಿ ಆ ರೀತಿ ಊಹೆ ಮಾಡಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಮೋ.ಸೈ ನಲ್ಲಿ ವೀಲಿಂಗ್ ಮಾಡಿ, ಮೃತ ವ್ಯಕ್ತಿ ಹಾಗೂ ಚಾಸಾ.2 ರವರು ಕಾರಿಗೆ ಡಿಕ್ಕಿ ಹೊಡೆದಿರುತ್ತಾರೆ, ಹೀಗಾಗಿ ಈ ಅಪಘಾತ ಆಗಿರುತ್ತದೆ ಹೊರತು ಆರೋಪಿ ಸಂ.2 ರವರ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಇಬ್ಬರ ತಪ್ಪು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಪಘಾತ ಆರೋಪಿ ಸಂ.2 ರವರ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ದಾಖಲೆಗಳನ್ನು ಪಡೆದಿಲ್ಲ ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸಂ.2 ರವರು ಸತ್ಯ ಹೇಳಿದ್ದರೂ ಸಹ ಪ್ರಕರಣಕ್ಕೆ ಅನುಕೂಲವಾಗುಂತೆ ಸ್ವ ಖುಷಿ ಹೇಳಿಕೆಯಲ್ಲಿ ಮಾಹಿತಿ ಬರೆಯಲಾಗಿದೆ ಎಂದರೆ ಸರಿಯಲ್ಲ. ದೃಡೀಕರಣ ಪತ್ರದಲ್ಲಿ ಯಾವ ಪೋಟೋ ಸ್ಟುಡಿಯೋದಿಂದ ಭಾವಚಿತ್ರಗಳ ಪ್ರಿಂಟ್ ಔಟ್ ತೆಗೆಯಲಾಗಿತ್ತು ಎಂದು ಮಾಹಿತಿ ಇಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿ ಸಂ.1 ರವರ ಕುಟುಂಬಕ್ಕೆ ಪರಿಹಾರ ಧನ ಕೊಡಿಸುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿ. ಸಿ. ನಂ.- **1132/23**

ಸಿ.ಡಬ್ಲ್ಯೂ.- **25** ಪಿ.ಡಬ್ಲ್ಯೂ.- **12**

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓ. ಹೆ. ಕೇ. ಸರಿ ಇದೆ.

ಸಹಿ-
1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ,
ಹೊಸಪೇಟೆ.

ಸಾಕ್ಷಿಯ ಸಹಿ

ರಿಮೋಟ್ ಪಾಯಿಂಟ್ ಕೋ ಆರ್ಡಿನೇಟರ್ ರವರ ಸಹಿ